ಬರಬೇಡಿ, ನೀವೊಬ್ರೆ ಬನ್ನಿ.'' ಎಂದಾಗ ಎಂಥದೋ ಸಮ್ಮೋಹನಕ್ಕೆ ಒಳಗಾದವರಂತೆ ಋಗ್ವೇದಿ ಒಪ್ಪಿದ್ದರು. ಒಂದು ವರ್ಕಿಂಗ್ ಡೇ ಮಧ್ಯಾಹ್ನವೇ ಊಟಕ್ಕೆ ಹೋಗುವುದು ನಿಗದಿಯಾಗಿತ್ತು. ಅಂದು ನಿಧಿ ಅಲೆಗ್ಸಾಂಡರಳ ಮನೆಗೆ ಹೋದಾಗ ಒಬ್ಬಳೇ ಇದ್ದಳು. ''ಬನ್ನಿ ಸಾರ್, ಅಡುಗೆ ಮಾಡಿಟ್ಟು ಅಪ್ಪ ಅಮ್ಮ ಅರ್ಜೆಂಟ್ ಮೆಸೇಜ್ ಬಂದಿದ್ದರಿಂದ ಹತ್ತಿರದ ನೆಂಟರನ್ನು ನೋಡಲು ಆಸ್ಪತ್ರೆಗೆ ಹೋಗಿದ್ದಾರೆ.'' ಎಂದು ಸ್ವಾಗತಿಸಿದ್ದಳು. ಸಿಂಪಲ್ ಟ್ರಾನ್ಸ್‌ಫರೆಂಟ್ ಡ್ರೆಸ್ಸಿನಲ್ಲಿದ್ದ ನಿಧಿ ಅಲೆಗ್ಸಾಂಡರ್ ಫ್ರೆಂಚ್ ಮಸ್ಕ್ ಸ್ಪ್ರೇಯಿಂದಾಗಿ ಘಮಘಮಿಸುತ್ತಿದ್ದಳು. ಋಗ್ವೇದಿಯವರಿಗೆ ಬಡಿಸಿ, ತಾನೂ ಬಡಿಸಿಕೊಂಡು ಜೊತೆಯಲ್ಲಿಯೇ ಊಟ ಮಾಡಿದ್ದಳು. ಊಟ ಬಹಳವೇ ರುಚಿಕರವಾಗಿತ್ತು. ಇಂದು ತುಂಬಾ ಹತ್ತಿರದಿಂದ ಋಗ್ವೇದಿಯವರು ನಿಧಿ ಅಲೆಗ್ಸಾಂಡರಳನ್ನು ನೋಡುತ್ತಿದ್ದರಿಂದ ಅವಳ ಅದ್ಭುತ ಪರ್ಸನಾಲಿಟಿ ಅವರ ಕಣ್ಣು ಮತ್ತು ಮನಸ್ಸು ಎರಡನ್ನೂ ಆವರಿಸಿಕೊಂಡು ವಿಚಲಿತರನ್ನಾಗಿ ಮಾಡಿತ್ತು. ಊಟ ಮುಗಿಸಿದಾಗ ನಿಧಿ ಅಲೆಗ್ಸಾಂಡರಳ ತಂದೆಯಿಂದ ತಾವು ಬರುವುದು ಸಂಜೆ ಐದೂವರೆ ಗಂಟೆಯಾಗಬಹುದೆಂದೂ, ಸಾಧ್ಯವಾದರೆ ಪ್ರೊಫೆಸರರನ್ನು ಅಲ್ಲಿಯವರೆಗೂ ಇರಿಸಿಕೊಳ್ಳಬೇಕೆಂದೂ ಫೋನ್ ಬಂದಿತ್ತು. ಆ ವಿಷಯವನ್ನು ನಿಧಿ ಅಲೆಗ್ಸಾಂಡರ್ ಋಗ್ವೇದಿಯವರಿಗೆ ಹೇಳಿದ್ದಳು. ಇನ್ನೊಮ್ಮೆ ಬರುವುದಾಗಿ ಹೇಳಿದರೂ ಋಗ್ವೇದಿಯವರ ಒಳಮನಸ್ಸು ಇದ್ದು ಬಿಡುವಂತೆ ಹೇಳುತ್ತಿತ್ತು. ನಿಧಿ ಅಲೆಗ್ಸಾಂಡರ್ ಪ್ರೊಫೆಸರರನ್ನು ಉಳಿದುಕೊಳ್ಳಲು ಕಣ್ಣುಗಳಲ್ಲೇ ಬೇಡಿಕೊಂಡಿದ್ದಳು. ಋಗ್ವೇದಿ ಇರಲು ಒಪ್ಪಿಕೊಂಡಿದ್ದರು. ಒಂದೇ ಸೋಫಾದಲ್ಲಿ ಇಬ್ಬರೂ ಕುಳಿತಿದ್ದರು. ಋಗ್ವೇದಿ ತಾನು ಏನು ಮಾಡುತ್ತಿರುವೆನೆಂದು ಮರೆತು ನಿಧಿ ಅಲೆಗ್ಸಾಂಡರಳನ್ನು ಅಪ್ಪಿಕೊಂಡು ಮುದ್ದಿಸಿದ್ದರು. ಬದಲಾಗಿ ನಿಧಿ ಅಲೆಗ್ಸಾಂಡರ್ ಪ್ರೊಫೆಸರರನ್ನು ಗಟ್ಟಿಯಾಗಿ ಆಲಂಗಿಸಿಕೊಂಡು ತನ್ನ ಬೆಡ್ ರೂಂ ಕಡೆ ನಡೆದಿದ್ದಳು. ಎರಡು ಗಂಟೆಗಳ ಕಾಲ ಋಗ್ವೇದಿ ಸುಖವನ್ನು ಸೂರೆಗೊಂಡಿದ್ದರು. ಹೀಗೆ ತಿಂಗಳಿಗೊಮ್ಮೆ ನಿಧಿ ಅಲೆಗ್ಸಾಂಡರ್ ತಂದೆ ತಾಯಿಗಳಿಲ್ಲದ ಸಮಯದಲ್ಲಿ ಋಗ್ವೇದಿಯವರನ್ನು ಕರೆಸಿಕೊಂಡು ಸುಖ ನೀಡಿದ್ದಳು. ಒಂದು ವರ್ಷದೊಳಗೆ ನಿಧಿ ಅಲೆಗ್ಸಾಂಡರಳಿಗೆ ಪಿಎಚ್.ಡಿ. ಅವಾರ್ಡ್ ಆಗಿತ್ತು. ಪಿಎಚ್.ಡಿ. ಅವಾರ್ಡ್ ಆದ ಎರಡು ತಿಂಗಳಲ್ಲಿ ನಿಧಿ ವಿದೇಶಕ್ಕೆ ಹಾರಿದ್ದಳು. ನಂತರ ಅವಳ ಫೋನಾಗಲೀ, ಅಡ್ರೆಸ್ ಆಗಲಿ ಸಿಕ್ಕಿರಲಿಲ್ಲ. ಪ್ರಜ್ಞಾ ಜೋಶಿಯ ಮಾತುಗಳಿಂದಾಗಿ ಹಿಂದಿನ ಮಧುರವಾದ ನೆನಪೊಂದಕ್ಕೆ ಜೋತುಬಿದ್ದ ಋಗ್ವೇದಿಯವರಿಗೆ ನಂತರ ಆ ನೆನಪು ಏಕೋ ಒಂದು ರೀತಿಯ ಸಂಕಟವನ್ನುಂಟುಮಾಡಿ ರಾತ್ರಿ ಬಹಳ ಹೊತ್ತಿನವರೆಗೂ ನಿದ್ದೆಯನ್ನು ಕಸಿದುಕೊಂಡಿತ್ತು.

ಮಾರನೆಯ ದಿನ ಸೋಮವಾರ ಬೆಳಗ್ಗೆ ಒಂಬತ್ತು ಗಂಟೆಯವರೆಗೂ ನಿದ್ದೆ ಮಾಡಿದ್ದ ಋಗ್ವೇದಿಯವರು ರೆಡಿಯಾಗಿ ಜನಾರ್ದನ ಹೋಟೆಲಿನಲ್ಲಿ ತಿಂಡಿ ತಿಂದು ಡಾಕ್ಟರ್ ನಾಗರಾಜ ಮೂರ್ತಿಯವರ ಕೌನ್ಸಿಲಿಂಗ್ ಸೆಂಟರ್ ಕಡೆ ನಡೆದಿದ್ದರು. ನಾಗರಾಜ ಮೂರ್ತಿ ಟ್ರೀಟ್‌ಮೆಂಟ್ ರೂಮಿನಲ್ಲಿ ಯಾರೊಂದಿಗೋ ಕೌನ್ಸೆಲಿಂಗ್ ನಡೆಸುತ್ತಿದ್ದರು. ರಿಸೆಪ್ಷನಿಸ್ಟ್ ಕೌನ್ಸಿಲಿಂಗ್ ಈಗ ತಾನೇ ಶುರುವಾಯಿತೆಂದೂ, ಮುಗಿಯಲು ಕನಿಷ್ಠ ಒಂದು ಗಂಟೆಯಾದರೂ ಹಿಡಿಯಬಹುದೆಂದು ಹೇಳಿ ಐದಾರು ಇಂಗ್ಲಿಷ್ ಪತ್ರಿಕೆಗಳನ್ನು ಟೀಪಾಯಿ ಮೇಲೆ ಇರಿಸಿ ತಾನೇ ಬ್ಲಾಕ್ ಟೀ ಮಾಡಿಕೊಟ್ಟಿದ್ದಳು. ಋಗ್ವೇದಿಯವರು ಟೀ ಕುಡಿದು ನಿಧಾನವಾಗಿ ಪತ್ರಿಕೆಗಳನ್ನು ಓದುವುದರಲ್ಲಿ ತಲ್ಲೀನರಾದರು. ಪತ್ರಿಕೆಯಲ್ಲಿನ ಒಂದು ಸುದ್ದಿ ಅವರನ್ನು ದಂಗು ಬಡಿಸಿತ್ತು. ವೆಂಕಟೇಶ್ ಯಾದವ್ ಎಂಬ ಅವರ ಹಳೆಯ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆಗೆ ಪ್ರಯತ್ನಿಸಿ ಆಸ್ಪತ್ರೆಯಲ್ಲಿ ಸಾವು ಬದುಕುಗಳ ನಡುವೆ ಒದ್ದಾಡುತ್ತಿದ್ದ. ಅವನು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದ. ನಲವತ್ತು ಪರ್ಸೆಂಟ್ ಸುಟ್ಟ ಗಾಯಗಳೊಂದಿಗೆ ಬದುಕುಳಿದಿದ್ದ. ವೆಂಕಟೇಶ್ ಯಾದವ್ ರಾಜಧಾನಿಯಲ್ಲಿ ಹೆಸರಾಂತ